## ಅಂಗೈಯಲ್ಲಿ ಅರಮನೆ

### ರಕ್ತದಾನ-ಜೀವದಾನ



ಗೆಳತಿಗೆ ಡೆಂಗ್ಯು ಆಗಿ ಆಸ್ಪತ್ರೆಯಲ್ಲಿದ್ದಳು. ಕ್ಷೇಮ ಸಮಾಚಾರ ಕೇಳಿಕೊಂಡು ಬರೋಣವೆಂದು ಆಸ್ಪತ್ರೆಗೆ ಹೋಗಿದ್ದೆ. ನರ್ಸ್ ಬಂದು ಮತ್ತೊಮ್ಮೆ ಬ್ಲಡ್ ಕಲೆಕ್ಟ್ ಮಾಡಿಕೊಂಡರು. 'ನೋಡಮ್ಮ, ಈ ಸಲ ಬಿಳಿರಕ್ತ ಕಣಗಳ ಸಂಖ್ಯೆ ಸುಧಾರಿಸಿದ್ದರೆ ಸರಿ. ಇಲ್ಲ ಅಂದ್ರೆ ರಕ್ತದ ವ್ಯವಸ್ಥೆ ಮಾಡಿಕೊಳ್ಳಬೇಕು. ನಿಮ್ಮ ಮನೆಯವರು ಬಂದ ಮೇಲೆ ಹೇಳಿ' ಅಂದರು. ನಾನು, 'ರಕ್ತದ ಅವಶ್ಯಕತೆ ಏನಾದ್ರೂ ಇದ್ರೆ ತಿಳಿಸು, ಬಂದು ಕೊಟ್ಟು ಹೋಗ್ತೀನಿ' ಅಂದೆ. ಅವಳು ಮಲಗಿದಲ್ಲಿಂದಲೇ ಕೈ ಮುಗಿದು, 'ಅಲ್ಲ ಕಣೆ, ನಿನ್ನ ಮೈಯಲ್ಲಿ ಇರೋದೇ ಪಾವುಸೇರು ರಕ್ತ... ಅದನ್ನೂ ನಾ ತಗೊಂಡು ಏನ್ಮಾಡ್ಲಿ? ಆಮೇಲೆ ನಿನಗೆ ಜೀವದಾನ ಮಾಡುವವರು ಯಾರು?' ಅಂದಳು. ನರ್ಸ್‌ಗೆ ನಗು ತಡೆಯಲಾಗದೇ ಹೊರಗೆ ಹೋದಳು.

**ಸುವರ್ಣ ಮಠ**

---



### ಸೆರೆಮನೆ

ಅಕ್ಕ ಹೇಳಿದ ಘಟನೆ. ಶಿಕ್ಷಕಿಯಾದ ಅಕ್ಕ, ಮಕ್ಕಳಿಗೆ ಪಾಠಮಾಡುವಾಗ 'ಅರಮನೆ ಅಂದ್ರೆ ಅರಸನು ವಾಸ ಮಾಡುವ ಸ್ಥಳ' ಎಂದು ಹೇಳಿಕೊಡುತ್ತಿದ್ದರಂತೆ. ಒಬ್ಬ ವಿದ್ಯಾರ್ಥಿ ಎದ್ದು ನಿಂತು, 'ಹಾಗಾದ್ರೆ ಪೋಲಿಸರು ವಾಸ ಮಾಡುವ ಸ್ಥಳ ಸೆರೆಮನೆ... ಅಲ್ವಾ ಮೇಡಂ?' ಎಂದು ಕೇಳಿದನಂತೆ. ಅಕ್ಕ ನಕ್ಕು, 'ಸೆರೆಮನೆ ಅಂದ್ರೆ ಖೈದಿಗಳು ವಾಸಿಸುವ ಸ್ಥಳ. ಪೋಲಿಸರು ಕರ್ತವ್ಯ ನಿರ್ವಹಿಸುವ ಸ್ಥಳ ಪೋಲಿಸ್ ಠಾಣೆ' ಎಂದು ವಿವರಿಸಿದರಂತೆ. ಮಕ್ಕಳ ವಿವೇಚನಾಶೀಲತೆಯನ್ನು ಗಮನಿಸಿ ನಗುತ್ತ ಹೇಳಿದಳು.

**ನರಸಿಂಹಾರೆಡ್ಡಿ ಯಂಕಾಮೋಳ**